ಮೈಯೆಲ್ಲ ಕಣ್ಣುಮಾಡಿಕೊಂಡು ಕಾವಲಿರುವುದು. ಕಾವಲಿರುವುದೆಂದರೆ ಯಾರದೋ ಬಂಗಲೆಯನ್ನೋ ಯಾವುದೋ ಕಸದ ತೊಟ್ಟಿಯನ್ನೋ ಕಾಯುವುದಲ್ಲ, ಜನರನ್ನು, ಅದರಲ್ಲೂ ಮುಖ್ಯವಾಗಿ ಅಪರಾಧಿಯನ್ನು ಕಾಯುವುದು. ಹೀಗೆ ತರಬೇತುಗೊಂಡ ನಾಯಿಗಳು ಅಪರಾಧಿಗಳ ಬಗ್ಗೆ ಎಚ್ಚರವಾಗಿರಬೇಕು; ಅಂಥವರ ಬಗ್ಗೆ ಅನುಕಂಪ ತೋರಿಸಬಾರದು, ಅವರನ್ನು ನೋಡಿ ಕೋಪಿಸಿಕೊಂಡು ಬೊಗಳಲೂಬಾರದು; ಮೌನವಾಗಿ ಬಳಿಸಾರಿ ಅವರ ಬಟ್ಟೆಗೋ ಕಾಲಿಗೋ ಬಾಯಿ ಹಾಕಿದರೆ ಸಾಕು, ಮುಂದಿನ ಕೆಲಸ ಪೊಲೀಸರಿಗೆ.

ಯಾರೋ ವೇದಿಕೆಯ ಮೇಲೆ ಮೈಕು ಹಿಡಿದುಕೊಂಡು ಇನ್ನೇನು ಸನ್ಮಾನ್ಯ ಮಂತ್ರಿಗಳು ಬರುವ ಹೊತ್ತಾಯಿತೆಂದೂ ಅವರು ಬಂದ ಕೂಡಲೇ ಎಲ್ಲರೂ ಎದ್ದುನಿಂತು ಗೌರವ ಸೂಚಿಸಬೇಕೆಂದೂ ಅವರನ್ನು ಮುತ್ತಿಕೊಳ್ಳದೆ ಸಹಕರಿಸಬೇಕೆಂದೂ ಗದ್ದಲ ಮಾಡದೆ ಶಿಸ್ತು ಪಾಲಿಸಬೇಕೆಂದೂ ಕೂಗಿಕೊಳ್ಳುತ್ತಿರುವಾಗಲೇ ಜನಸಮೂಹವನ್ನು ಹಿಂದಿಟ್ಟುಕೊಂಡ ಮಂತ್ರಿಗಳ ಟ್ರಕ್ಕು ಪೆಂಡಾಲಿನ ಬಳಿಯೇ ಬಂದು ನಿಂತಿತು. ಅದರಿಂದ ಭದ್ರಪ್ಪನವರನ್ನು ಇಳಿಸಿಕೊಳ್ಳಲು ಮೊದಲೇ ಸಿದ್ಧರಾಗಿದ್ದ ನೂರಾರು ಮುಖಂಡರು ಕಿವಿಗಡಚಿಕ್ಕುವಂತೆ ಜೈಕಾರ ಹಾಕಿದರು. ಪೊಲೀಸರ ದಂಡು ಜನರು ಮುನ್ನುಗ್ಗಿ ಬಂದು ಮುತ್ತಿಕೊಳ್ಳದಂತೆ ಭದ್ರಪ್ಪನವರ ಎರಡೂ ಪಕ್ಕದಲ್ಲಿ ಪರಸ್ಪರ ಕೈಹಿಡಿದುಕೊಂಡು, ಅವರ ಜೊತೆಗೇ ಅಡ್ಡಡ್ಡ ನಡೆಯುತ್ತ ತಾವೇ ತಡೆಗೋಡೆಯಾದರು. ಕಡೆಗೂ ಭದ್ರಪ್ಪನವರು ವೇದಿಕೆ ಹತ್ತಿ ಸಭೆಯಲ್ಲಿದ್ದವರನ್ನು ಅಭಿಮಾನದಿಂದ ನೋಡುತ್ತಾ ಅವರತ್ತ ಕೈಬೀಸಿ ಕೈಮುಗಿದು ವೇದಿಕೆಯ ಮಧ್ಯದಲ್ಲಿದ್ದ ಸಿಂಹಾಸನದಲ್ಲಿ ಆಸೀನರಾಗುವ ಹೊತ್ತಿಗೆ ಹದಿನೈದು ಇಪ್ಪತ್ತು ನಿಮಿಷಗಳೇ ಆದವು. ಅವರ ಪಕ್ಕದಲ್ಲೇ ಸನ್ಮಾನ್ಯ ನಾಗಯ್ಯನವರು, ಇತರ ರಾಜಕೀಯ ಹುರಿಯಾಳುಗಳು ಜಾಗ ಮಾಡಿಕೊಂಡು ಕುಳಿತರು. ಪ್ರಾರ್ಥನೆಯಾದ ಮೇಲೆ ನಮ್ಮ ಕ್ಷೇತ್ರದ ನಾಯಕರಾದ ರಂಗಧಾಮಯ್ಯನವರು ಮಂತ್ರಿ ಭದ್ರಪ್ಪನವರ ಆಡಳಿತದಲ್ಲಿ ನಮ್ಮ ನಾಡು ಎಂಥ ಅಭೂತಪೂರ್ವ ಮುನ್ನಡೆ ಸಾಧಿಸಿತೆಂದು ಅಂಕಿಅಂಶಗಳ ಸಮೇತ ನಮ್ಮೆಲ್ಲರಿಗೆ ಮನದಟ್ಟು ಮಾಡಿಕೊಟ್ಟು ತಮ್ಮ ಸ್ವಾಗತ ಭಾಷಣವನ್ನು ಮುಗಿಸಿದರು.

ನಂತರ ಭದ್ರಪ್ಪನವರು

